# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 270 |
| ಸದಸ್ಯರ ಹೆಸರು | ಶ್ರೀ ಯು.ಬಿ. ವೆಂಕಟೇಶ್ |
| ಉತ್ತರಿಸುವ ದಿನಾಂಕ | 15.02.2023 |
| ಉತ್ತರಿಸುವವರು | ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆ, ಕಾಪು ತಾಲ್ಲೂಕು, ಎಲ್ಲೂರಿನ ಮಹತೋಭಾರ ಶ್ರೀ ವಿಶ್ವೇಶ್ವರ ದೇವಸ್ಥಾನಗಳಲ್ಲಿ ಪರಂಪರಾಗತವಾಗಿ ನಡೆಯುತ್ತಿರುವ ಸಂಪ್ರದಾಯ ಮತ್ತು ಆಚರಣಾ ಪದ್ಧತಿಗಳನ್ನು ಪ್ರಸ್ತುತ ವ್ಯವಸ್ಥಾಪನಾ ಸಮಿತಿಯು ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಉಡುಪಿ ಜಿಲ್ಲೆ, ಕಾಪು ತಾಲ್ಲೂಕು, ಎಲ್ಲೂರಿನ ಮಹತೋಭಾರ ಶ್ರೀ ವಿಶ್ವೇಶ್ವರ ದೇವಾಲಯವು ಧಾರ್ಮಿಕ ದತ್ತಿ ಇಲಾಖಾ ಆಡಳಿತಕ್ಕೆ ಒಳಪಡುವ ಸಮೂಹ "ಎ" ಪ್ರವರ್ಗದ ಅಧಿಸೂಚಿತ ಸಂಸ್ಥೆಯಾಗಿರುತ್ತದೆ.<br><br>ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ ಇವರ ವರದಿಯನ್ವಯ ಈ ದೇವಾಲಯದಲ್ಲಿ ಪರಂಪರಾಗತವಾಗಿ ನಡೆಯುತ್ತಿರುವ ಸಂಪ್ರದಾಯ ಮತ್ತು ಆಚರಣಾ ಪದ್ಧತಿಗಳನ್ನು ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿ ಮತ್ತು ಆಚರಣೆಯಂತೆ ನಡೆಯುತ್ತಿದ್ದು, ವ್ಯವಸ್ಥಾಪನಾ ಸಮಿತಿಯವರು ಯಾವುದೇ ಸಂಪ್ರದಾಯ ಮತ್ತು ಆಚರಣೆಯನ್ನು ಕೈಬಿಟ್ಟಿರುವುದಿಲ್ಲ. |
| ಆ) | ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ವ್ಯವಸ್ಥಾಪನಾ ಸಮಿತಿಯ ನಡವಳಿಕೆಯ ವಿರುದ್ಧ ಕೈಗೊಂಡಿರುವ ಕ್ರಮಗಳೇನು; | ಉದ್ಭವಿಸುವುದಿಲ್ಲ. |
| ಇ) | ಧಾರ್ಮಿಕ ದತ್ತಿ ಇಲಾಖೆಯ 'ಎ' ಪ್ರವರ್ಗದ ದೇವಸ್ಥಾನಗಳಲ್ಲಿನ ವ್ಯವಸ್ಥಾಪನಾ ಸಮಿತಿಗಳು ಶತ ಶತಮಾನಗಳಿಂದ ಸಂಪ್ರದಾಯ ಬದ್ಧವಾಗಿ ಸಾಗಿ ಬಂದಿರುವ ಆಚರಣೆಗಳನ್ನು ಬದಲಾಯಿಸಲು ಅಧಿಕಾರವನ್ನು ನೀಡಲಾಗಿದೆಯೇ; ಹಾಗಿದ್ದಲ್ಲಿ ಸರ್ಕಾರದ ಆದೇಶ ಮತ್ತು ಸಂಪ್ರದಾಯಗಳ ಬದಲಾವಣೆಗೆ ವ್ಯವಸ್ಥಾಪನಾ ಸಮಿತಿಯು ಕೈಗೊಂಡಿರುವ ನಿರ್ಣಯವೇನು; | ಧಾರ್ಮಿಕ ದತ್ತಿ ಇಲಾಖಾ ಆಡಳಿತಕ್ಕೆ ಒಳಪಡುವ ಸಮೂಹ "ಎ" ಪ್ರವರ್ಗದ ಅಧಿಸೂಚಿತ ದೇವಾಲಯದಲ್ಲಿನ ಶತ ಶತಮಾನಗಳಿಂದ ಸಂಪ್ರದಾಯ ಬದ್ಧವಾಗಿ ಸಾಗಿ ಬಂದಿರುವ ಆಚರಣೆಗಳನ್ನು ಬದಲಾಯಿಸಲು ವ್ಯವಸ್ಥಾಪನಾ ಸಮಿತಿಗಳಿಗೆ ಅಧಿಕಾರ ನೀಡಿರುವುದಿಲ್ಲ. |
| ಈ) | ಸಂಪ್ರದಾಯ ಮತ್ತು ಆಚರಣೆಗಳನ್ನು ಬದಿಗೊತ್ತಿ ಕಾರ್ಯ ನಿರ್ವಹಿಸಲು ಅನುಮತಿ ನೀಡಿರುವ ಕಾರ್ಯನಿರ್ವಾಹಕ ಅಧಿಕಾರಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವರದಿಯನ್ನು ನೀಡುವುದು) | ಉದ್ಭವಿಸುವುದಿಲ್ಲ. |

ಸಂಖ್ಯೆ: ಕಂಇ 17 ಮುಸಪ್ರ 2023

(ಶಶಿಕಲಾ. ಅ.ಜೊಲ್ಲೆ)
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು

Scanned with CamScanner